MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - TUESDAY 30-5-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

### ಹೆಸರು ಕಾಳು ಆವಕ ಹೆಚ್ಚಳದ ಹೊರತಾಗಿಯೂ ದರ ಇಳಿಕೆಯಿಲ್ಲ

ಬೇಸಿಗೆ ಬೆಳೆಯ ಹೆಸರುಕಾಳು ಆವಕ ಹೆಚ್ಚಳದ ಹೊರತಾಗಿಯೂ ಕಾನ್ಪುರದಲ್ಲಿ ದರ ಇಳಿಕೆಯಾಗಿಲ್ಲವೆನ್ನಲಾಗಿದೆ. ಗುಣಮಟ್ಟ ಉತ್ತಮವಿದ್ದು ಸಂಸ್ಕರಣೆಗಾರರು, ಮಿಲ್‌ಗಳು ಹಾಗೂ ದಾಸ್ತಾನುದಾರರಿಂದ ಉತ್ತಮ ಬೇಡಿಕೆಯ ಹಿನ್ನಲೆಯಲ್ಲಿ ದರ ಇಳಿಕೆಯಾಗಿಲ್ಲವೆನ್ನಲಾಗಿದೆ.

### ಕಸ್ಟಂಸ್ ಕ್ಲಿಯರೆನ್ಸ್‌ನ ನಂತರ ಒಂದು ತಿಂಗಳೊಳಗೆ ಬೇಳೆಕಾಳು ದಾಸ್ತಾನು ಬಿಡುಗಡೆಯಾಗಬೇಕು.

ಆಮದುದಾರರು ಕಸ್ಟಂಸ್ ಕ್ಲಿಯರೆನ್ಸ್ ಪೂರ್ಣಗೊಂಡ ಬಳಿಕ 30 ದಿನಗಳೊಳಗೆ ಬೇಳೆಕಾಳು ಮಾರುಕಟ್ಟೆಗೆ ಬಿಡುಗಡೆಗೊಳಿಸಲು ಸರಕಾರ ಸೂಚಿಸಿದೆಯೆನ್ನಲಾಗಿದೆ. ತೊಗರಿ, ಉದ್ದು ಹಾಗೂ ಅವುಗಳ ಬೇಳೆಗಳ ದರ ಏರಿಕೆಯಾಗುವುದನ್ನು ತಡೆಯಲು ಸರಕಾರ ಈ ಸೂಚನೆ ನೀಡಿದೆಯೆನ್ನಲಾಗಿದೆ. 30 ದಿನಗಳಿಗಿಂತ ಹೆಚ್ಚು ದಾಸ್ತಾನು ಮಾಡದೆ ಇರಲು ಸೂಚಿಸಿದೆಯೆನ್ನಲಾಗಿದೆ.

### 52.04 ಮಿಲಿಯನ್ ಟನ್ ತಲುಪಿದ ಸರಕಾರಿ ಅಕ್ಕಿ ಖರೀದಿ

2022–23 ರಲ್ಲಿ ಇದುವರೆಗೆ ಸರಕಾರಿ ಏಜೆನ್ಸಿಗಳು 52.06 ಮಿಲಿಯನ್ ಟನ್ ಅಕ್ಕಿ ಖರೀದಿಸಿವೆಯೆನ್ನಲಾಗಿದೆ. 2021– 22 ರಲ್ಲಿ 57.58 ಮಿಲಿಯನ್ ಟನ್ ಅಕ್ಕಿ ಖರೀದಿಯಾಗಿತ್ತೆನ್ನಲಾಗಿದೆ.

### ಹಿಂದಿನ ವಾರ ಏರಿಕೆಯಾಗಿದ್ದ ಮಲೇಶೀಯನ್ ಪಾಮೆಣ್ಣೆ ದರ ಇಳಿಕೆ

ಹಿಂದಿನ ವಾರ ಉತ್ಪಾದನೆ ಇಳಿಕೆಯಾಗುವ ಶಂಕೆಯಿಂದ ಹೆಚ್ಚಳವಾಗಿದ್ದ ಮಲೇಶೀಯನ್ ಪಾಮೆಣ್ಣೆ ದರ ಪರ್ಯಾಯ ಖಾದ್ಯತೈಲ ದರ ಇಳಿಕೆಯ ಪರಿಣಾಮ 1.15 ಶೇಕಡಾ ಇಳಿಕೆಯಾಗಿ ಟನ್‌ಗೆ 3518 ರಿಂಗಿಟ್ಸ್ ($ 793.24) ಆಗಿದೆ.

### ಸಕ್ಕರೆ ದರ ಸ್ಥಿರ

ಕೊಲ್ಹಾಪುರದಲ್ಲಿ ಸಕ್ಕರೆ ದರ ಸ್ಥಿರವಿದ್ದು, ಮುಜಫರ್ ನಗರ ದಲ್ಲಿ ಕ್ವಿಂಟಾಲ್‌ಗೆ ರೂ 10 ದರ ಹೆಚ್ಚಳವಾಗಿದೆಯೆನ್ನಲಾಗಿದೆ. ಜೂನ್ ತಿಂಗಳಿಗೆ 23 ಲಕ್ಷ ಟನ್ ಸಕ್ಕರೆ ಬಿಡುಗಡೆಯಾಗುವ ನಿರೀಕ್ಷೆಯಿದೆಯೆನ್ನಲಾಗಿದ್ದು, ಇದು ಹಿಂದಿನ ವರ್ಷದ ಜೂನ್ ತಿಂಗಳಿಗಿಂತ ಹೆಚ್ಚಳವಾಗಿದೆ. ಪ್ರಬಲ ಬೇಡಿಕೆಯಿಂದ ದರ ಹೆಚ್ಚಳದಲ್ಲಿದೆಯೆನ್ನಲಾಗಿದೆ.

### ಹವಾಮಾನ ವೈಪರೀತ್ಯ, ರೋಗಗಳಿಂದ ಅಡಿಕೆ ಉತ್ಪಾದನೆ ಇಳಿಕೆ

ಈ ವರ್ಷ ಹೆಚ್ಚಿನ ಬಿಸಿಲು, ತಾಪಮಾನದಿಂದ ಪ್ರಮುಖ ಅಡಿಕೆ ಬೆಳೆಯುವ ಪ್ರದೇಶಗಳಲ್ಲಿ ಉತ್ಪಾದನೆ ಇಳಿಕೆಯಾಗುವ ಸಾಧ್ಯತೆಯಿದೆಯೆನ್ನಲಾಗಿದೆ. ಹೆಚ್ಚಿದ ಬಿಸಿಲ ಭಾದೆ, ತಾಪಮಾನದಿಂದ ಇಳುವರಿ ಕಡಿಮೆಯಾಗಲಿದೆಯೆನ್ನಲಾಗಿದೆ. ನೀರಾವರಿ ಚೆನ್ನಾಗಿರುವ ಪ್ರದೇಶಗಳಲ್ಲೇ ಅಡಿಕೆ ಮರಗಳು ಬಿಸಿಲ ತಾಪ ತಾಳಲಾರದೆ ಬಾಡುತ್ತಿವೆ. ನೀರಾವರಿ ಕಡಿಮೆಯಿರುವಲ್ಲಿ ಅಡಿಕೆ ಮರಗಳು ಒಣಗಿ ಕೆಲವಡೆ ಉಳಿಯುವುದೇ ಕಷ್ಟವೆನ್ನಲಾಗಿದೆ. ಅದರೊಂದಿಗೆ ಬೇಸಿಗೆಯಲ್ಲಿ ಅಡಿಕೆ ಎಲೆ, ಹಿಂಗಾರಗಳಿಗೆ ರೋಗ ಭಾದೆಯಿಂದಲೂ ಇಳುವರಿ ಕಡಿಮೆಯಾಗಲಿದೆಯೆನ್ನಲಾಗಿದೆ. ಅಲ್ಲದೆ ಕೆಲವಡೆ ಎಲೆಚುಕ್ಕಿ, ಹಳದಿರೋಗ ಮುಂತಾದ ರೋಗಗಳಿಂದ ತೋಟಗಳಿಗೆ ಹಾನಿಯಾಗಿದೆ. ಇಳುವರಿ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗುವ ಸಾಧ್ಯತೆಯಿದ್ದು ಮುಂದಿನ ದಿನಗಳಲ್ಲಿ ದರ ಹೆಚ್ಚಳಕ್ಕೆ ಕಾರಣವಾಗುವ ಸಾಧ್ಯತೆ ಇದೆಯೆನ್ನಲಾಗಿದೆ.

### ಕೆಲವು ರಾಜ್ಯಗಳಲ್ಲಿ ಗೋಧಿ ಖರೀದಿ ವೇಗ ಇಳಿಕೆ

ವ್ಯಾಪಾರಿಗಳಿಂದ ಹಾಗೂ ಮಿಲ್‌ಗಳಿಂದ ಖರೀದಿಗೆ ತೀವ್ರ ಸ್ಪರ್ಧೆ ಇರುವುದರಿಂದ ಕೆಲವು ರಾಜ್ಯಗಳಲ್ಲಿ ಸರಕಾರಿ ಖರೀದಿಯ ವೇಗ ಕಡಿಮೆಯಾಗಿದೆಯೆನ್ನಲಾಗಿದೆ. ಸರಕಾರಿ ಖರೀದಿ ದರಕ್ಕಿಂತ ಹೆಚ್ಚಿನ ದರದಲ್ಲಿ ವ್ಯಾಪಾರಿಗಳು ಹಾಗೂ ಮಿಲ್‌ಗಳು ರೈತರಿಂದ ಖರೀದಿ ಮಾಡುತ್ತಿದ್ದಾರೆನ್ನಲಾಗಿದೆ. ರಾಜಸ್ಥಾನ, ಉತ್ತರಪ್ರದೇಶ ಮತ್ತು ಬಿಹಾರಗಳಲ್ಲಿ ಗೋಧಿ ಆವಕ ಇಳಿಕೆಯಾಗಿದೆಯೆನ್ನಲಾಗಿದ್ದು, ಅಲ್ಲಿ ಸರಕಾರಿ ಏಜೆನ್ಸಿಗಳ ಖರೀದಿ ವೇಗ ಕುಸಿಯಿರುವ ಸರಕಾರಿ ಏಜೆನ್ಸಿಗಳಿಂದ ಇದುವರೆಗೆ 26.1 ಮಿಲಿಯನ್ ಟನ್ ಖರೀದಿಯಾಗಿದೆಯೆನ್ನಲಾಗಿದೆ. ಎಫ್.ಸಿ.ಐ ಯೊಂದಿಗೆ ಇತರ ಸರಕಾರಿ ಖರೀದಿ ಏಜೆನ್ಸಿಗಳು ಸೇರಿ ಮುಂದಿನ ದಿನಗಳಲ್ಲಿ ಹೆಚ್ಚಿನ ಖರೀದಿ ನಡೆಸಲಿದೆಯೆನ್ನಲಾಗಿದೆ.

### ಬೇಳೆಕಾಳು ದರ ಹೆಚ್ಚಳ

ಪ್ರಮುಖ ಬೇಳೆಗಳಾದ ಉದ್ದು, ತೊಗರಿ ಇವುಗಳ ದರಗಳು ಕ್ವಿಂ.ಗೆ ಸುಮಾರು ರೂ.500 ರಿಂದ 600 ಹೆಚ್ಚಳಗೊಂಡಿದೆ. ಮುಂದಿನ ಬೆಳೆಗೆ ಮಳೆಯ ಕೊರತೆಯ ಶಂಕೆ, ಹಿಂದಿನ ಬೆಳೆಯ ಉತ್ಪಾದನೆ ಇಳಿಕೆ ಬೇಡಿಕೆಗೆ ತಕ್ಕಷ್ಟು ಪೂರೈಕೆಯ ಅಭಾವದಿಂದ ದರಗಳು ಹೆಚ್ಚಳ ಕಂಡಿವೆಯೆನ್ನಲಾಗಿದೆ. ಮಳೆಗಾಲದಲ್ಲಿ ಸಾಕಷ್ಟು ಮಳೆಯಾಗಿ ಹೊಸಬೆಳೆ ಸಾಕಷ್ಟು ಉತ್ತಮಗೊಳ್ಳುವ ಸಾಧ್ಯತೆ ಗೋಚರಿಸಿದರೆ ದರ ಏರಿಕೆಗೆ ತಡೆಯಾಗಬಹುದು.